ಇನ್ನೊಂದು ಘಟನೆ ಆಗಕ್ಕೆ ನಾನು ಬಿಡಲ್ಲ' ಅಂದರು ಎಲ್ಸಿ.

ರೋಸ್ ಬಸ್ಸಿಳಿದು ಮನೆ ತಲುಪುವ ಮೊದಲೇ ಎಲ್ಸೀ – ಸೂಸನ್ ವಿಲಿಯಂರೊಡನೆ ಒಂದು ರೌಂಡಿನ ಮಾತುಕತೆ ಮುಗಿಸಿದ್ದರು. ಬಿಗಿದ ಮುಖದಲ್ಲಿದ್ದ ಅಮ್ಮ ರೋಸ್‌ಳನ್ನು ಕಂಡೊಡನೆ ಮಾತಾಡಿಸಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ, 'ನಂಗೊತ್ತು... ನೀನು ಇಂಥದ್ದೇ ಏನಕ್ಕೋ ಹೋಗಿದ್ದು ಅಂತ. ಎಷ್ಟು ದಿನದಿಂದ ಅವನ ಜೊತೆ ಇದೆಲ್ಲ ನಡೀತಿತ್ತು?' ಅಂತ ಕಟಕಿದಳು. ರೋಸ್ ನಗುತ್ತಾ, 'ನಿನ್ನೆಯಿಂದ' ಅಂದಳು. 'ಅಂದ್ರೆ?' ಎಂದ ತಾಯಿಗೆ, 'ಈವರೆಗೂ ಏನೂ ಇರಲಿಲ್ಲ. ಬರೀ ಫ್ರೆಂಡ್ಸ್ ಮಾತ್ರ. ನಿನ್ನೆಯಿಂದ ಬೇರೇನೆ... ವಿ ಆರ್ ಇನ್ ಲವ್' ಅಂದಳು. 'ಮದುವೆಯಾಗುವವರೆಗೆ ಲವ್ವು... ಆಮೇಲೆ ಬೌ ಬೌವ್ವು. ನಿಂಗೆ ಈಗ ಇದೆಲ್ಲ ಅರ್ಥವಾಗಲ್ಲ. ಎಲ್ಲ ಬಿಟ್ಟು ಒಬ್ಬ ಆರ್ಡಿನರಿ ಬ್ಯಾಂಕರ್‌ನ ಮದ್ವೆ ಆಗ್ತಿದೀಯ. ಆಮೇಲೆ ನೀನೆ ಅನುಭವಿಸ್ತೀಯ' ಅಂದರು. ಅಲ್ಲೇ ಇದ್ದ ವಿಲಿಯಂ ಸಿಡುಕುತ್ತಾ, 'ಬ್ಯಾಂಕರ್‌ನ ಮಾಡ್ಕೊಂಡು ನೀನೇನು ಕಷ್ಟ ಅನುಭವಿಸಿದೆ ಸೂಸನ್? ಆಂ...' ಅಂದಾಗ, 'ಅದು ಹಾಗಲ್ಲ... ನಮ್ಮ ಕಾಲಬೇರೆ ಇತ್ತು' ಅಂದರು. ವಿಲಿಯಂ, 'ಯಾವ ಕಾಲದಲ್ಲೂ ಅಷ್ಟೇ... ಹುಡುಗ ಯೋಗ್ಯನಾಗಿರಬೇಕು. ಅವಳಿಗಿಷ್ಟವಾದವನನ್ನು ಅವಳು ಮಾಡ್ಕೋತಾಳೆ ಬಿಡು' ಅಂದರು. 'ಎಲ್ಲ ಬಿಟ್ಟು ಅವನ್ನನ್ನು! ಒಂದು ಕಾರ್ ಕೂಡ ತಗೊಂಡಿಲ್ಲ ಇನ್ನೂ' ಅಂತ ಕಟಕಿದಳು. 'ತಗೊಳ್ಳದಿದ್ರೆ ಬೇಡ, ಬೈಕಲ್ಲೇ ಓಡಾಡ್ತಾರೆ ಹಾಗೂ ಬೇಕಾದ್ರೆ ನಾನವಳಿಗೆ ಕಾರ್ ಕೊಡಿಸ್ತೀನಿ' ಅಂದರು. ಎರಡು ದಿನಗಳಲ್ಲಿ ಮೂರ್ತಿ ಫೋನ್ ಮಾಡಿದ. ಅವರ ಮನೆಯಲ್ಲಿ ಒಪ್ಪಿರುವುದನ್ನು ಹೇಳುತ್ತಾ ಕಲ್ಯಾಣಮಂಟಪದ ಹಿಂದೂ ಮದುವೆಯೇ ಬೇಕೆಂದು ಹೇಳುತ್ತಿದ್ದಾರೆ ಎಂದ. 'ನಾವಿಬ್ಬರು ಮನಸ್ಸು ಮಾಡಿದರೆ ಯಾವ ಧಾರ್ಮಿಕ ವಿಧಿಗಳು ಇಲ್ಲದ ರಿಜಿಸ್ಟರ್ ಮದುವೆ ಮಾಡಿಕೊಳ್ಳಬಹುದು. ಅದರಿಂದ ಯಾರಿಗೂ ಮನಸ್ಸು ನೋಯುವುದಿಲ್ಲ. ಯೋಚನೆ ಮಾಡಿ ತಿಳಿಸು' ಎಂದ. ರೋಸ್, 'ಹೌದು ನಂಗೂ ಅದೇ ಸರಿ ಅನ್ನಿಸುತ್ತಿದೆ. ಯಾರಿಗೂ ನೋವಾಗದಂತೆ, ಯಾವ ಅರಿಮೆಯೂ ಕಾಡದಂತೆ ನಾವಿಬ್ಬರು ರಿಜಿಸ್ಟರ್ ಮದುವೆ ಮಾಡಿಕೊಳ್ಳೋಣ' ಎಂದಳು. ಇಬ್ಬರ ಮನಸ್ಸಲ್ಲು ಶಾಂತಿ ಸಮಾಧಾನ ತುಂಬಿ ಖುಷಿ ಹೆಚ್ಚಿತು.

ಒಂದಿಷ್ಟು ದಿನ ಮನೆಯಲ್ಲಿ ಬಿಗುವಿನ ವಾತಾವರಣ ಇದ್ದರೂ ಆಮೇಲೆ ಎಲ್ಲ ತಿಳಿಯಾಗ ತೊಡಗಿತು. 'ಅವರ ಮನೇಲಿ ಚರ್ಚ್ ವೆಡ್ಡಿಂಗ್‌ಗೆ ಒಪ್ತಾರೆ ತಾನೆ?' ಎಂದು ಕೇಳಿದ ಸೂಸನಮ್ಮರಿಗೆ, 'ಇಲ್ಲ, ನಮ್ಮಿಬ್ಬರಿಗೂ ಚರ್ಚ್ ವೆಡ್ಡಿಂಗೂ ಬೇಡ, ಕಲ್ಯಾಣ ಮಂಟಪವೂ ಬೇಕಿಲ್ಲ. ನಾವು ರಿಜಿಸ್ಟರ್ ಮದ್ವೆ ಮಾಡ್ಕೋತೀವಿ. ಆಮೇಲೆ ಒಂದು ರಿಸೆಪ್ಶನ್' ಅಂದಳು. ಮೂರ್ತಿಯ ಅಪ್ಪ ಅಮ್ಮಂದಿರು ಸಂಪ್ರದಾಯ ರೀತ್ಯ ಹೆಣ್ಣು ನೋಡಲು ಬಂದರು. ಯಾರೂ ಯಾವುದೇ ಕಹಿ ಇಟ್ಟುಕೊಳ್ಳದೆ ನಗುನಗುತ್ತಾ ಮಾತಾಡಿದರು. ಯಾವ ಸಂಪ್ರದಾಯವೂ ಇಲ್ಲದೆ ರಿಜಿಸ್ಟ್ರಾರ್ ಕಚೇರಿಯಲ್ಲಿ ಮದುವೆ ನಡೆಯಿತು. ಆ ಮೇಲಿನ ಅದ್ದೂರಿ ಆರತಕ್ಷತೆ. ಅಜ್ಜಿ ಮಾತ್ರ ಇಗರ್ಜಿಗೆ ಹೋಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಬಂದರು.

**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನವರು. ಕತೆ, ಕಾದಂಬರಿ, ಕವಿತೆ, ನಾಟಕ, ಪ್ರಬಂಧ ಪ್ರಕಾರಗಳಲ್ಲಿ ಬರೆದಿರುವ ಅವರು 15ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.